Scarcity of Kerosene diesel and petrol caused inconvenience to the public in the state.

561 - Sri Basavaraj Patil Attur (Basavakalyam) : Will the Hon'ble Minister for Food and Civil Supplies be pleased to state?

1) *Whether, it has come to the notice of government that scarcity of kerosene, diesel and petrol caused inconvemience to the public in the state.*

2) *If so, the action taken by government to overcome the scarcity.*

Sri T.N. NARASIMHA MURTHY (Minister for Food and Civil Supplies)

1) Yes.

2) The state government has requested the government of India to supply 57,000 KLs. of kerosene and 99,000 MTs. of diesel to meet the requirement of the public. Due to foreign exchange constraint, Government of India is not in a position to supply as per the requirements. However, Government of India is supplying 91,614 MTs. of High Speed Diesel, 48,000 KLs. of kerosene and 18,148 MTs of petrol per month.

In addition to this all the Deputy Commissioners have been delegated powers for proper distribution of diesel on priority basis to :

a) Farmers;

b) Transport agencies engaged in transporting essential commodities, water supply Boards, Nursing Home/Hospitals and other essential services and to.

c) Industries and Fisheries.

Government has also take action to intensify the de-hoarding operations so as to prevent black marketing.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ನಾನು ಸೀಮೆ ಎಣ್ಣೆ ವಿಚಾರವಾಗಿ ಕೇಳುತ್ತೇನೆ. ಸೀಮೆ ಎಣ್ಣೆ ಸಾಮಾನ್ಯ ಜನರಿಗೆ ಬೀದರ್ ಜಿಲ್ಲೆಯಲ್ಲಿ, ವಿಶೇಷವಾಗಿ ನಮ್ಮ ರಾಜ್ಯದಲ್ಲೇ ಸಿಕ್ಕದೆ ಬಹಳ ತೊಂದರೆಯಾಗಿದೆ. ಸೀಮೆ ಎಣ್ಣೆ, ಡೀಸಲ್, ಪೆಟ್ರೋಲ್ ಸಿಕ್ಕದೆ ಜನತೆ ಬಹಳ ತೊಂದರೆಗೊಳಗಾಗಿದ್ದಾರೆ. ಇದನ್ನು ನಿವಾರಿಸುವುದಕ್ಕಾಗಿ ಸರ್ಕಾರ ತೆಗೆದುಕೊಂಡ ನಿರ್ದಿಷ್ಟವಾದ ಕ್ರಮವೇನು ಎಂಬುದನ್ನು ತಿಳಿಸಬೇಕು. ಕೇಂದ್ರ ಸರ್ಕಾರದಿಂದ ಸೀಮೆ ಎಣ್ಣೆ, ಡೀಸೆಲ್ ಪೆಟ್ರೋಲ್ ಇವುಗಳ ಬಿಡುಗಡೆ ಬಗ್ಗೆ ನಮಗೆ ಮಾಹಿತಿಯನ್ನು ಕೊಟ್ಟಿದ್ದೀರಿ. ಇನ್ನೂ ಹೆಚ್ಚಿನ ರೀತಿಯಲ್ಲಿ ಬಿಡುಗಡೆ ಮಾಡುವಂತೆ ಪ್ರಯತ್ನ ಮಾಡಬೇಕಾಗಿದೆ. ಎರಡನೆಯದಾಗಿ ವಿಶೇಷವಾಗಿ ಹೇಳಬೇಕೆಂದರೆ ಈಗ ಬೀದರ್ ಜಿಲ್ಲೆಯಲ್ಲಿ ಕಬ್ಬು ಅರೆಯುವಂಥ ಸೀಸನ್. ಈ ಸೀಸನ್‌ನಲ್ಲಿ ಟ್ರಾಕ್ಟರ್‌ಗೆ ಡೀಸೆಲ್ ಸಿಕ್ಕುತ್ತಿಲ್ಲ, ಅಲ್ಲಿರುವಂಥ ಕ್ರಶರ್‌ಗೂ ಡೀಸೆಲ್ ಸಿಕ್ಕುತ್ತಿಲ್ಲ, ಸಣ್ಣ ಸಣ್ಣ ಜನರು ಸೀಮೇ ಎಣ್ಣೆ ಸಿಕ್ಕದೆ ತೊಂದರೆ ಪಡುತ್ತಿದ್ದಾರೆ. ಮೊನ್ನೆ ನನ್ನ ಮನೆಯ ಮುಂದೆ ಧರಣಿ ಮಾಡಿದರು. ಹಾಗೂ ಸೀಮೆ ಎಣ್ಣೆ, ಡೀಸೆಲ್ ಸಿಕ್ಕದ ಜನ ನನ್ನ ಮತಕ್ಷೇತ್ರವಾದಂಥ ಬಸವಕಲ್ಯಾಣದಲ್ಲೂ ಕೂಡ ನನ್ನ ಮುಂದೆ ಧರಣಿ ಮಾಡಿದರು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ರಾಜ್ಯದಲ್ಲಿ ಡೀಸೆಲ್ ಮತ್ತು ಸೀಮೆ ಎಣ್ಣೆ ಕೊರತೆ ಇದೆ. ಆದರೆ ಸೀಮೆ ಎಣ್ಣೆ ಕೊರತೆಯ ಬಗ್ಗೆ ನಾನು ಈಗಾಗಲೇ ಅನೇಕ ಸಾರಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈಗ ನಮಗೆ 47,000 ಲೀಟರ್ ಸೀಮೆ ಎಣ್ಣೆ ಬೇಕು. ಆದರೆ ಕೇಂದ್ರ ಸರ್ಕಾರ ನಮಗೆ ಅಲಾಟ್ ಮಾಡಿದ್ದುದು 48,000 ಕಿಲೋ ಲೀಟರ್, ಅದು ಈಗ ಬರುತ್ತಾ ಇದೆ. ಆದರೆ, ಎಲ್ಲಾ ಪೂರ್ಣ ಹೊಣೆಗಾರಿಕೆಯನ್ನು ಜಿಲ್ಲಾ ಅಧಿಕಾರಿಗಳಿಗೆ ಬಿಟ್ಟಿದ್ದೇವೆ. ಮಾನ್ಯ ಸದಸ್ಯರಾದಂಥ ಬಸವರಾಜ್ ಪಾಟೀಲ್ ಅಟ್ಟೂರ್ ರವರು ನಿರ್ದಿಷ್ಟವಾಗಿ ತಮ್ಮ ಬೀದರ್ ಜಿಲ್ಲೆಯಲ್ಲಿ ಸೀಮೆ ಎಣ್ಣೆ ಡೀಸೆಲ್ ಕೊರತೆ ಇಂತಹ ಕಡೆ ಇದೆ ಎಂದರೆ ನಾನು ಸಂಜೆಯೊಳಗೆ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಏನಾದರೂ ಕೊರತೆ ಇದ್ದಲ್ಲಿ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ. ಲೋಪದೋಷಗಳು ಇದ್ದರೆ ಸರಿಪಡಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ವಿಶೇಷವಾಗಿ ಟ್ರಾಕ್ಟರ್ ಕೊಂಡು ಭೂಮಿಯನ್ನು ಉಳುವಂಥ ರೈತರಿಗೆ ಹಾಗೂ ಪಂಪ್ ಸೆಟ್‌ನಿಂದ ನೀರಾವರಿ ಮಾಡುವಂಥ ರೈತರಿಗೆ ಒಂದು ವಾರಕ್ಕೆ ನಿರ್ದಿಷ್ಟವಾಗಿ 500 ಅಥವಾ 600 ಲೀಟರ್ ಡೀಸೆಲನ್ನು ನಿಗಧಿ ಪಡಿಸಿ. ಇವ್ಮೊತ್ತು ರೈತರು ಬಹಳ ಕಷ್ಟದಲ್ಲಿದ್ದಾರೆ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ತಮ್ಮ ಎರಡನೆಯ ಪ್ರಶ್ನೆಗೆ ನಾನು ಈಗಾಗಲೇ ಹೇಳಿದ್ದೇನೆ. ಇದರ ಜೊತೆಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ನೀಡಿ ಡೀಸೆಲ್ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಈ ಕೆಳಕಂಡ ಅಗತ್ಯ ಸೇವೆಗಳಿಗೆ ಅಂದರೆ ಕೃಷಿ ಕ್ಷೇತ್ರಕ್ಕೆ ಆದ್ಯತೆ ಮೇಲೆ ಕೊಡಬೇಕು. ನೀರು ಸರಬರಾಜು ಮಂಡಳಿ, ನರ್ಸಿಂಗ್ ಹೋಮ್‌ಗಳಿಗೆ ಹಾಗೂ ಹಾಸ್ಪಿಟಲ್ ಮತ್ತಿತರ ಸೇವೆಗಳಿಗೆ ಉಪಯೋಗಿಸಲು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಕೈಗಾರಿಕೆ ಹಾಗೂ ಮೀನುಗಾರಿಕೆಗೆ ಕೂಡಾ ನಾವು ಆದ್ಯತೆ ಕೊಡಬೇಕೆಂದು ಹೇಳಿದ್ದೇವೆ. ಇದಲ್ಲದೆ, ವಿಶೇಷ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾಧಿಕಾರಿಗಳ ವಿವೇಚನೆಗೆ ಬಿಟ್ಟು ಆದ್ಯತೆ ಮೇಲೆ ಡೀಸೆಲ್ ಕೊಡಬೇಕೆಂದು ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇವೆ. ಏನಾದರೂ ವ್ಯತ್ಯಾಸವಿದ್ದಲ್ಲಿ ಹೇಳಿ, ನಾನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಡೀಸೆಲ್ ಕೊರತೆ ಸರ್ಕಾರ ಕಲ್ಪನೆ ಮಾಡಿರತಕ್ಕಂಥಾದ್ದು. ಈ ದಿಸೆಯಲ್ಲಿ ಬೆಂಗಳೂರಿನಲ್ಲಿರುವ ಪತ್ರಿಕೆಗಳು, ಕೆಲವು ವರದಿಗಾರರು ಹೋಗಿ ಡೀಸೆಲ್ ಎಣ್ಣೆಯನ್ನು ಎಲ್ಲಿ ಮುಚ್ಚಿಟ್ಟಿದ್ದರೋ ಅದನ್ನು ಅವರು ತೆಗೆದು ತೋರಿಸಿದ್ದಾರೆ. ಪೆಟ್ರೋಲ್ ಬಂಕ್‌ನಲ್ಲಿ ಡೀಸೆಲ್ ಇಲ್ಲ, ಪಕ್ಕದಲ್ಲಿ 4 ಬ್ಯಾರಲ್ ಡೀಸೆಲ್ ಸಿಕ್ಕಿದ್ದು ನಿಮ್ಮ ಗಮನಕ್ಕೆ ತಂದಿದ್ದಾರೆ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ತಿಳಿಸಿ.

ಶ್ರೀ ಟಿ.ಎನ್. ನರಸಿಂಹ ಮೂರ್ತಿ : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮತ್ತಿತರ ಸದಸ್ಯರುಗಳಿಗೆ ತಿಳಿಸುವುದೇನೆಂದರೆ, ಮೊನ್ನೆ ಒಂದು ಪತ್ರಿಕಾಗೋಷ್ಠಿಯಲ್ಲಿ ಕೆಲವು ಪತ್ರಿಕೆಯವರು ಹೀಗೆಲ್ಲಾ ಅಕ್ರಮಗಳು ನಡೆಯುತ್ತಿದೆ ಎಂದರು. ನಾನು ಹೇಳಿದೆ, ಈ ಗಳಿಗೆಗೆ ಬೇಕಾದರೆ ಇದಕ್ಕೆ ವ್ಯವಸ್ಥೆ ಮಾಡುತ್ತೇನೆ, ತಾವು ಕೂಡಾ ಜೊತೆಯಲ್ಲಿ ಹೋಗಿ ಎಂದು ಹೇಳಿದೆ. ನಮ್ಮ ಹಿರಿಯ ಅಧಿಕಾರಿಗಳೊಂದಿಗೆ ಪತ್ರಿಕಾ ಸ್ನೇಹಿತರುಗಳನ್ನು ಕಾರಿನಲ್ಲಿ ಕಳುಹಿಸಿಕೊಟ್ಟು ಕನಕಪುರ ರಸ್ತೆಯಲ್ಲಿ ಕೆಲವು 'ಪೆಟ್ರೋಲ್ ಬಂಕ್‌ನಲ್ಲಿ ಅಕ್ರಮ ನಡೆಯುತ್ತಿದ್ದು, ಕೆಲವು ಲೋಪದೋಷಗಳು ಕಂಡ ತಕ್ಷಣ ಅವರ ಮೇಲೆ ಕ್ರಿಮಿನಲ್ ಕೇಸುಗಳನ್ನು ನಾವು ಈಗಾಗಲೇ ಹೂಡಿದ್ದೇವೆ. ಬಹುಶಃ ಅವ್ಮೊತ್ತು ಡೀಸೆಲ್‌ನ ಕೆಲವು ಬ್ಯಾರೆಲ್ಸ್ ಸಿಕ್ಕಿದ್ದು, ಅದನ್ನು ನಾವು ಸೀಜ್ ಮಾಡಿದ್ದೇವೆ. ಅಲ್ಲದೆ, ಆ ಸ್ಥಳದಲ್ಲೇ ಕ್ರಮ ಕೈಗೊಂಡು ಇನ್ನು ಯಾವುದಾದರೂ ತಮ್ಮ ಗಮನಕ್ಕೆ ಬಂದದ್ದನ್ನು ತಿಳಿಸಿದರೆ, ಮತ್ತು ಎಲ್ಲಿಯೇ ಅಕ್ರಮ ನಡೆದರೂ ಕೂಡಾ ಯಾವುದೇ

ಗಳಿಗೆಯಲ್ಲಿ ನಮ್ಮ ಸರ್ಕಾರ ಶೀಘ್ರವಾಗಿ ಕ್ರಮ ಕೈಗೊಂಡು ಸರಿಪಡಿಸಲು ಪ್ರಯತ್ನ ಮಾಡುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ತಾಲ್ಲೂಕಿಗೆ ಒಂದು ಟ್ರಾಕ್ಟರ್‌ಗೆ ತಿಂಗಳಿಗೆ ನೂರು ಲೀಟರ್ ಡೀಸೆಲ್ ಕೊಡುತ್ತಾರೆ, ಒಂದು ದಿವಸಕ್ಕೆ ಮೂರು ಲೀಟರ್ ಆಯಿತು, ಮೂರು ಲೀಟರ್‌ನಲ್ಲಿ ಟ್ರಾಕ್ಟರ್ ಓಡಿಸಲು ಸಾಧ್ಯವಾಗುತ್ತದೆಯೇ? ಜೊತೆಗೆ ಹಳ್ಳಿಯಿಂದ ಪೆಟ್ರೋಲ್ ಬಂಕ್‌ಗೆ ಬಂದರೆ ಒಂದು ಸಾರಿಗೆ ಇಪ್ಪತ್ತೈದು ಲೀಟರ್ ಕೊಡುತ್ತಾರೆ, ಒಂದೇ ಸಾರಿ ನೂರು ಲೀಟರ್ ಕೊಡಿ ಎಂದು ಪೆಟ್ರೋಲ್ ಬಂಕ್‌ನವರನ್ನು ಕೇಳಿದರೆ ನಮಗೆ ಒಟ್ಟಿಗೆ ಬರುವುದಿಲ್ಲ ನಮಗೆ ಬಂದ ಹಾಗೆ ಕೊಡುತ್ತೇವೆ ಎನ್ನುತ್ತಾರೆ. ಒಂದು ಸಾರಿ ಹಳ್ಳಿಯಿಂದ ಬಂದು ಹೋಗಬೇಕಾದರೆ 15-20 ಮೈಲಿಯಾಗುತ್ತದೆ, ಎಂಟು ಹತ್ತು ಲೀಟರ್ ಡೀಸೆಲ್ ಬೇಕಾಗುತ್ತದೆ.ಈ ರೀತಿ ವ್ಯವಸ್ಥೆಯಾದರೆ ಎಂಟು ರೂಪಾಯಿಯನ್ನು ಕೊಟ್ಟು ಕೊಂಡುಕೊಳ್ಳದೆ ಏನು ಮಾಡುತ್ತಾರೆ? ಎಷ್ಟು ಡೀಸೆಲ್ ಬೇಕಾಗುತ್ತದೆ ಎಂದು ತಾವು ರೈತರನ್ನು ಕೇಳಿ ನಿಮ್ಮ ಆಫೀಸಿನವರನ್ನು ಕೇಳಿ ಎಷ್ಟು ಕೊಡಬಹುದೆಂದು ರೈತರು ಟ್ರಾಕ್ಟರ್ ಸಾಲದ ಮೇಲಿನ ಬಡ್ಡಿಯನ್ನು ಕೊಡಬೇಕಾಗುತ್ತದೆ, ಡ್ರೈವರ್ ಸಂಬಳ ಕೊಡಬೇಕಾಗುತ್ತದೆ, ಕೊಡದಿದ್ದರೆ ಕೆಲಸವಾಗುವುದಿಲ್ಲ, ಆದುದರಿಂದ ದಯಮಾಡಿ ಇದರ ಕಡೆ ಗಮನಕೊಡಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸದಸ್ಯರಾದ ಜಾಲಪ್ಪನವರು ರೈತನ ಮಗನೆಂದು ಪ್ರತಿಪಾದನೆ ಮಾಡಿದ್ದಾರೆ, ನನಗೆ ರೈತರ ಸಮಸ್ಯೆಗಳು ಗೊತ್ತಿಲ್ಲ ಎಂದು ಹೇಳಿದ್ದಾರೆ. ಅವರು ರೈತರ ಮಗನಾದರೆ ನಾನು ಶ್ರಮಜೀವಿ ರೈತ ಕಾರ್ಮಿಕನ ಮಗನಾಗಿ ಹುಟ್ಟಿರುವ ನನಗೆ ರೈತರ ಸಮಸ್ಯೆಗಳು ಏನು ಎನ್ನುವುದು ಗೊತ್ತಿದೆ. ಮಾನ್ಯ ಅಧ್ಯಕ್ಷರೆ ಇವೊತ್ತು ಕೊಲ್ಲಿ ಯುದ್ಧವಾದನಂತರ ಈ ಡೀಸೆಲ್ ದೊರಕುವುದರ ಬಗ್ಗೆ ಬಳಕೆದಾರರಲ್ಲಿ ಶಂಕೆ ಇತ್ತು. ಇಡೀ ರಾಷ್ಟ್ರಕ್ಕೆ ಮಾತ್ರವಲ್ಲ ಜಗತ್ತಿಗೆ ಒಂದು ಭೀತಿ, ಆತಂಕ ಇತ್ತು. ಮಾನ್ಯ ಸದಸ್ಯರು ಈಗ ಸಾವಧಾನದಿಂದ ಕೇಳಬಹುದು ಈ ಪರಿಸ್ಥಿತಿ ಸುಧಾರಿಸಿದೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ ಅವರ ಪ್ರಕಾರ ಎಷ್ಟು ನಮ್ಮ ರಾಜ್ಯಕ್ಕೆ ಡೀಸೆಲ್ ಒದಗಿಸಬಹುದು ಅಷ್ಟನ್ನು ಒದಗಿಸುತ್ತಿದ್ದಾರೆ, ಆದರೆ ಒದಗಿಸುತ್ತಿರುವ ಡೀಸೆಲ್, ಸೀಮೆಎಣ್ಣೆಯು ಸಮರ್ಪಕವಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ, ವಿತರಣಾ ವ್ಯವಸ್ಥೆಯನ್ನು ಸರಿಪಡಿಸಬೇಕೆಂದರೆ ಕೊಲ್ಲಿ ಯುದ್ಧಕ್ಕೆ ಹೋಗುತ್ತಾರೆ. ಇಲ್ಲಿ ಆಗುವ ವಿಚಾರವನ್ನು ಅದರಲ್ಲಿಯೂ ಕರ್ನಾಟಕದ ಬೆಂಗಳೂರಿನಲ್ಲಿ ನಡೆಯುವ ವಿಚಾರವನ್ನು ದಯಮಾಡಿ ಗಮನಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ತಾವು ಹೇಳಿದ ರೀತಿಯಲ್ಲಿ ಎಲ್ಲವುಗಳನ್ನು ಸಮರ್ಪಕವಾಗಿ ನೋಡಿಕೊಳ್ಳಲು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಟಿ.ಎನ್. ನರಸಿಂಹ ಮೂರ್ತಿ : ಮಾನ್ಯ ಸದಸ್ಯರು ಹೇಳಿದಂತಹ ಅಕ್ರಮ ದಾಸ್ತಾನು ಕಲಬೆರಕೆ ಮುಂತಾದವುಗಳು ಏನೂ ನಡೆದಿಲ್ಲವೆಂದು ನಾನು ಹೇಳುತ್ತಿಲ್ಲ, ಈಗಾಗಲೇ ಫುಡ್ ಡಿಪಾರ್ಟ್‌ಮೆಂಟ್, ಫುಡ್‌ಸೆಲ್‌ಗಳು ಅನೇಕ ಕಡೆ ಕಾಳಸಂತೆಕೋರರ ಮೇಲೆ ದಾಳಿ ಮಾಡಿ ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಎಷ್ಟು ಜನರನ್ನು ಬಂಧಿಸಿದ್ದೀರಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಪ್ರಶ್ನೋತ್ತರ ವೇಳೆಯಲ್ಲಿ ಎಷ್ಟು ಹೇಳಬೇಕೋ ಅಷ್ಟನ್ನು ಹೇಳಿದ್ದೇನೆ. ಉತ್ತರ ಸಮರ್ಪಕವಾಗಿಲ್ಲವೆಂದು ಹೇಳಿದರೆ ಅದಕ್ಕೆ ಉತ್ತರ

ಹೇಳಲು ಸರ್ಕಾರ ಸಿದ್ಧವಿದೆ. ಇಂದು ಸದಸ್ಯರು ಹೇಳಿದಂತಹ ಆತಂಕ ಕಡಿಮೆಯಾಗಿದೆ, ಡೀಸೆಲ್ ಸಾಕಷ್ಟು ಪ್ರಮಾಣದಲ್ಲಿ ಇದೆ, ಯಾವ ರೀತಿಯ ಆತಂಕ ಇಲ್ಲ, ಭಯವಿಲ್ಲ, ಭೀತಿಯಿಲ್ಲ ವಿತರಣೆಯಲ್ಲಿ ಏನಾದರೂ ಲೋಪದೋಷವಿದ್ದರೆ ಸರಿಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸಾರ್ವಜನಿಕರಿಗೆ ಡೀಸೆಲ್ ಸಿಗುತ್ತಿಲ್ಲ ಮಂತ್ರಿಗಳಿಗೆ ಸಿಗುತ್ತಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರ

ಚಿತ್ತಾಪುರ ತಾಲ್ಲೂಕಿಗೆ ಕುಡಿಯುವ ನೀರಿನ ಸರಬರಾಜು

560 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಮತಕ್ಷೇತ್ರದಲ್ಲಿ ಬರುವ ಚಿತ್ತಾಪುರ ತಾಲ್ಲೂಕಿನ ಸಂಕನೂರ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಇಂದಿಗೂ ಬವಣೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಗುಲ್ಬರ್ಗಾ ಜಿಲ್ಲಾ ಪರಿಷತ್ ಈಗಾಗಲೇ ಮುಖ್ಯ ಅಭಿಯಂತರರು ಪಿ.ಹೆಚ್.ಇ. ಬೆಂಗಳೂರು ಇವರು ಎರಡು ಮೂರು ಸಲ ಕ್ರಮ ಕೈಗೊಳ್ಳಲು ತಿಳಿಸಿದರೂ ಸಹ ಈ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡದಿರಲು ಕಾರಣಗಳೇನು

ಇ) ಈ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸಲು ಸರ್ಕಾರ ಯೋಜನೆಯನ್ನೇನಾದರೂ ಕೈಗೊಂಡಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) 1990-91ನೇ ಸಾಲಿನ ಆಯವ್ಯಯದ ರಾಜ್ಯವಲಯದಲ್ಲಿರುವ ಅನುದಾನದಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಇ) ಈ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸಲು ಸದರಿ ಗ್ರಾಮದ ಪುನರುಜ್ಜೀವನ ಯೋಜನೆಯನ್ನು 1991-92ರ ಸಾಲಿನಲ್ಲಿ ಕೈಗೊಂಡ ನೀರಿನ ಬವಣೆಯನ್ನು ಪರಿಹರಿಸಲು ಯೋಜಿಸಲಾಗಿದೆ.

ಮಾಗಡಿ ತಾಲ್ಲೂಕಿನಲ್ಲಿರುವ ಮಾರುಕಟ್ಟೆ ವ್ಯವಸಾಯೋತ್ಪನ್ನ ಸಹಕಾರ ಸಂಘ

158 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ): ಮಾನ್ಯ ಸಹಾಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿರುವ ಮಾರುಕಟ್ಟೆ ವ್ಯವಸಾಯೋತ್ಪನ್ನ ಸಹಕಾರ ಸಂಘವು ಕಳೆದ ಮೂರು ವರ್ಷಗಳಿಂದ ಮುಚ್ಚಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು)

ಅ) ಇಲ್ಲ, ಈ ಸಹಕಾರ ಸಂಘವು ಕಳೆದ ಮೂರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದೆ.

ಆ) ಮೇಲಿನ ಪ್ರಶ್ನೆಗೆ ನೀಡಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.